# ಶ್ರೀಮಾತೆಯವರ ನೆನಪುಗಳು

ಇಂಗ್ಲಿಷ್ ಮೂಲ : **ಕುಮುದ ಬಂಧು ಸೇನ್** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಭಾಗ -೧**

(ಈ ಸ್ಮೃತಿಲೇಖನವು ರಾಮಕೃಷ್ಣ ಮಹಾಸಂಘದ ಆಂಗ್ಲ ಮಾಸಪತ್ರಿಕೆ 'Prabhudda Bharatha' ದ ೧೯೫೨ರ ಏಪ್ರಿಲ್, ಜೂನ್, ಅಕ್ಟೋಬರ್ ಹಾಗೂ ಡಿಸೆಂಬರ್ ತಿಂಗಳುಗಳಲ್ಲಿ ಪ್ರಕಟವಾದ ಲೇಖನದ ಅನುವಾದ. ಇದು '**ಶ್ರೀ ಶ್ರೀ ಮಾಯೇರ್ ಪದಪ್ರಾಂತೇ**' ಗ್ರಂಥದ ಮೊದಲನೇ ಭಾಗದಲ್ಲಿ ಬಂಗಾಳಿಗೆ ಅನುವಾದಗೊಂಡು ಪ್ರಕಟವಾಗಿದೆ. ಪ್ರಸ್ತುತ ಕನ್ನಡಾನುವಾದಕ್ಕೆ ಮೂಲ ಇಂಗ್ಲಿಷ್ ಆವೃತ್ತಿಯನ್ನು ಅವಲಂಬಿಸಲಾಗಿದೆ. *(-ಅನು.)* )

ಅದು ನನ್ನ ಜೀವನದಲ್ಲಿ ಸ್ಮರಣಾರ್ಹ ದಿನ. ಕಲ್ಕತ್ತೆಯಲ್ಲಿ ಶ್ರೀಮಾತೆ ಶಾರದಾಮಣಿ ದೇವಿಯವರ ಸಂಪರ್ಕಕ್ಕೆ ಬರುವ ಸುಯೋಗ ನನಗೊದಗಿ ಬಂದಿದ್ದು ಆ ದಿನ. ಆಗ ನಾನಿನ್ನೂ ಶಾಲೆಯಲ್ಲಿದ್ದೆ; ಪ್ರವೇಶ ಪರೀಕ್ಷೆಗಾಗಿ ತಯಾರುಮಾಡಿಕೊಳ್ಳುತ್ತಿದ್ದೆ. ೧೮೯೫ರ ಮಧ್ಯಭಾಗದ ಸುಮಾರಿಗೆ ಅದು ನಡೆಯಿತು.

ಆಗ ನಾನು ಸ್ವಾಮಿ ಯೋಗಾನಂದರ ಬಳಿಗೆ ಆಗಾಗ ಹೋಗುತ್ತಿದ್ದೆ. ಅವರು ಆಗ ಕಲ್ಕತ್ತೆಯ ಉತ್ತರ ಭಾಗದಲ್ಲಿದ್ದ ಬಾಗ್‌ಬಜಾರಿನ, ರಮಾಕಾಂತ ಬೋಸ್ ಬೀದಿಯ, ೫೭ನೇ ನಂಬರಿನ ಬಲರಾಮ ಬಸುವಿನ ಮನೆಯಲ್ಲಿ ವಾಸವಾಗಿದ್ದರು. ಶ್ರೀರಾಮಕೃಷ್ಣರು ತಮ್ಮ ಭಕ್ತರನ್ನು ಹಾಗೂ ಶಿಷ್ಯಂದಿರನ್ನು ಭೇಟಿಯಾಗಲು ದಕ್ಷಿಣೇಶ್ವರದಿಂದ ಅಲ್ಲಿಗೆ ಬಂದಾಗಲೆಲ್ಲ ತಂಗುತ್ತಿದ್ದ ಕೋಣೆಯಲ್ಲಿ ಅವರು ಬಿಡಾರ ಹೂಡಿದ್ದರು. ಆ ಕೋಣೆಯನ್ನು ಸ್ವಾಮಿ ಯೋಗಾನಂದರ ಮಲಗುವ ಕೋಣೆಯನ್ನಾಗಿ ಪರಿವರ್ತಿಸಲಾಗಿತ್ತು. ಅದರ ಪಕ್ಕದಲ್ಲಿದ್ದ ಹಾಲ್‌ನಲ್ಲಿ ಕುಳಿತು ಅವರು ಅಲ್ಲಿಗೆ ಬರುತ್ತಿದ್ದ ಶ್ರೀರಾಮಕೃಷ್ಣರ ಭಕ್ತರಿಗೆ ಮತ್ತು ಅನುಯಾಯಿಗಳಿಗೆ ಆಧ್ಯಾತ್ಮಿಕ ಪ್ರವಚನ ನೀಡುತ್ತಿದ್ದರು. ಕೆಲವೊಮ್ಮೆ ಈ ಹಾಲ್ ಆಲಂಬಜಾರಿನಲ್ಲಿದ್ದ ಮಠದ ಸಂನ್ಯಾಸಿಗಳಿಂದ ತುಂಬಿರುತ್ತಿತ್ತು. ಬಲರಾಮ ಬಸುವಿನ ಮಗ ರಾಮಕೃಷ್ಣ ಬಸು ಅದೇ ಹಾಲ್ ಅನ್ನು ಬೈಠಕ್ ಖಾನೆಯಾಗಿ ಬಳಸುತ್ತಿದ್ದನು. ರಾಮಕೃಷ್ಣ ಬಸುವಿನ ಇಡೀ ಕುಟುಂಬವು ಶ್ರೀರಾಮಕೃಷ್ಣರಿಗೆ ಹಾಗೂ ಅವರ ಸಂನ್ಯಾಸಿ ಶಿಷ್ಯಂದಿರಿಗೆ ಅತ್ಯಂತ ಶ್ರದ್ಧಾಭಕ್ತಿಯಿಂದ ನಡೆದುಕೊಳ್ಳುತ್ತಿತ್ತು ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಬಲರಾಮ ಬಸು ತಮ್ಮ ರಸದ್ದಾರರಲ್ಲಿ (ಅಗತ್ಯವಾದ ವಸ್ತುಗಳನ್ನು ಪೂರೈಸುವವನು) ಒಬ್ಬನೆಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅವನ ಶ್ರದ್ಧೆ, ಭಕ್ತಿ, ಶ್ರೀರಾಮಕೃಷ್ಣರ ಹಾಗೂ ಅವರ ಪ್ರಿಯ ಶಿಷ್ಯರ ಸೇವೆ ಮಾಡುವುದರಲ್ಲಿ ಅವನಿಗಿದ್ದ



ಕಾತರತೆ ಹಾಗೂ ಧಾರಾಳತನ, ಪ್ರೀತಿ, ಅವನ ಪರಿಶುದ್ಧವೂ ಗೌರವಾನ್ವಿತವೂ ಆದರ್ಶದಾಯಕವೂ ಆದ ಚಾರಿತ್ರ್ಯ ಇವುಗಳು 'ಶ್ರೀರಾಮಕೃಷ್ಣ ವಚನವೇದ' ಹಾಗೂ 'ಶ್ರೀರಾಮಕೃಷ್ಣ ಲೀಲಾ ಪ್ರಸಂಗ' ಗ್ರಂಥಗಳನ್ನು ಓದಿದವರಿಗೆ ಚಿರಪರಿಚಿತವಾಗಿವೆ. ಬಲರಾಮ ಬಸುವಿನ ಮೇಲಿದ್ದ ಗೌರವದಿಂದಾಗಿ ಜನರು ಆ ಮನೆಯನ್ನು 'ಬಲರಾಮ ಮಂದಿರ' ಎಂದು ಕರೆಯು ತ್ತಿದ್ದರು. ಶ್ರೀರಾಮಕೃಷ್ಣರ, ಅವರ ಆಧ್ಯಾತ್ಮಿಕ ಸಹಧರ್ಮಿಣಿ ಶ್ರೀಮಾತೆಯವರ, ಸ್ವಾಮಿ ವಿವೇಕಾನಂದರ, ಅವರ ಗುರುಭಾಯಿಗಳ ಹಾಗೂ ಇವರೆಲ್ಲರ ಶಿಷ್ಯಂದಿರ ಆಗಮನದಿಂದ ಆ ಮನೆ ಪವಿತ್ರವಾಗಿದೆ. ಆ ಕೋಣೆ ಹಾಗೂ ಹಾಲ್ ಇವುಗಳು ಈಗ ಪವಿತ್ರ

ಸ್ಥಳವಾಗಿದೆ — ಕೋಣೆಯು ಶ್ರೀರಾಮಕೃಷ್ಣರ ಮಂದಿರ ವಾಗಿದೆ; ಹಾಗೂ ಹಾಲ್ ಆಧ್ಯಾತ್ಮಿಕ ಪ್ರವಚನ, ಭಜನೆ - ಕೀರ್ತನೆಗಳು ನಡೆಯುವ ಸ್ಥಳವಾಗಿದೆ.

ಸ್ವಾಮಿ ಯೋಗಾನಂದರಿಂದಲೇ ನಾನು ಮೊತ್ತಮೊದಲು ಶ್ರೀಮಾತೆಯವರು ಕಲ್ಕತ್ತೆಗೆ ಬಂದಿದ್ದಾರೆ ಎಂದು ತಿಳಿದೆ. ಶ್ರೀರಾಮಕೃಷ್ಣರ ಯುವ ಭಕ್ತನಾದ ಶರತ್ ಸರ್ಕಾರ್ ಎಂಬವರ ಮನೆಯಲ್ಲಿ ಅವರು ತಂಗಿದ್ದಾರೆ ಎಂದೂ ಅವರು ತಿಳಿಸಿದ್ದರು. ಬಲರಾಮ ಮಂದಿರದ ಪಶ್ಚಿಮ ಭಾಗದಲ್ಲಿದ್ದ ಅಗಲಕಿರಿದಾದ ಬೀದಿಯಲ್ಲಿ ಆ ಮನೆಯಿತ್ತು.

ಮರುದಿನ ನಾನು ಬೆಳಿಗ್ಗೆ ಗಂಗಾಸ್ನಾನ ಮಾಡಿ, ಕೆಂದಾವರೆ ಹೂಗಳು ಹಾಗೂ ಸಿಹಿತಿಂಡಿಗಳನ್ನು ತೆಗೆದುಕೊಂಡು ಅಲ್ಲಿಗೆ ಹೋದೆ. ಮನೆಯ ಬಾಗಿಲ ಬಳಿ ನಿಂತಿದ್ದ ಶರತ್ ಸರ್ಕಾರ್, ನನ್ನನ್ನು ಮೇಲಂತಸ್ತಿನ ಒಂದು ದೊಡ್ಡ ಕೋಣೆಯ ಬಳಿಗೆ ಕರೆದುಕೊಂಡು ಹೋದರು. ಶ್ರೀಮಾತೆಯವರು ಪೂಜೆ ಮಾಡು ತ್ತಿದ್ದುದರಿಂದ ಅಲ್ಲೇ ಕಾಯಲು ಹೇಳಿದರು. ಅನಂತರ ಅವರು, ನಾನು ಶ್ರೀಮಾತೆಯವರ ದರ್ಶನ ಪಡೆಯಲು ಬಂದಿರುವ ವಿಷಯವನ್ನು ತಿಳಿಸಲು ತಮ್ಮ ಬಂಧುಗಳೊಬ್ಬರನ್ನು ಶ್ರೀಮಾತೆ ಯವರ ಬಳಿಗೆ ಕಳುಹಿಸಿದರು. ಕಾಲು ಗಂಟೆಯೊಳಗಾಗಿ ಶ್ರೀಮಾತೆಯವರನ್ನು ಭೇಟಿಯಾಗಲು ಗೋಲಾಪ್ ಮಾ ನನ್ನನ್ನು ಕರೆದರು. ನಾನು ಕಾಯುತ್ತ ನಿಂತಿದ್ದ ಸ್ಥಳಕ್ಕೆ ಉತ್ತರ ಭಾಗದಲ್ಲಿದ್ದ ಕೋಣೆಯ ಹೊಸ್ತಿಲ ಮುಂದೆ ಗೋಲಾಪ್ ಮಾ ನಿಂತಿದ್ದರು.

ನನ್ನ ಎದೆ ಕಂಪಿಸುತ್ತಿತ್ತು, ನಾನು ಭಾವೋದ್ವೇಗಕ್ಕೆ ಒಳಗಾ ಗಿದ್ದೆ; ಸಿಹಿತಿಂಡಿಯನ್ನು ಗೋಲಾಪ್ ಮಾಗೆ ಕೊಟ್ಟು, ನಿಧಾನ ವಾಗಿ ಆ ಕೋಣೆಯತ್ತ ಹೋದೆ. (ಶರತ್ ಸರ್ಕಾರ್ ಮುಂದೆ ತಿಳಿಸುವವರೆಗೂ ಅದು ಗೋಲಾಪ್ ಮಾ ಎಂದು ನನಗೆ ತಿಳಿ ದಿರಲಿಲ್ಲ.) ಗೋಲಾಪ್ ಮಾ ಅವರ ಪಕ್ಕದಲ್ಲಿ ಶ್ರೀಮಾತೆ ಯವರು ನಿಂತಿದ್ದುದನ್ನು ನಾನು ಕಂಡೆ. ಬಿಳಿಯ ವಸ್ತ್ರವೊಂದು ಅವರ ಇಡೀ ದೇಹವನ್ನು ಅವರಿಸಿತ್ತು, ಆದರೆ ಅವರ ಪಾದ ಗಳನ್ನು ವಸ್ತ್ರ ಆವರಿಸಿರಲಿಲ್ಲ. ನನ್ನ ಬಳಿ ಇದ್ದ ಎಲ್ಲ ಹೂವುಗಳನ್ನು ನಾನು ಅವರ ಪಾದಗಳಿಗೆ ಅರ್ಪಿಸಿದೆ. ಭಕ್ತಿ, ಗೌರವಗಳಿಂದ ನಾನು ಅವರಿಗೆ ನಮಸ್ಕರಿಸಿದೆ. ಅಲ್ಲಿ ಅಗಾಧ ಮೌನ ವ್ಯಾಪಿ ಸಿತ್ತು. ಅವರಿಬ್ಬರಿಗೂ ನಾನು ಅಪರಿಚಿತನಾಗಿದ್ದೆ. ಆ ಮೌನ ದಲ್ಲಿ ಶ್ರೀಮಾತೆಯವರು ನನ್ನ ತಲೆಯ ಮೇಲೆ ಕೈಯನ್ನಿಟ್ಟು ನನ್ನನ್ನು ಆಶೀರ್ವದಿಸಿದರು. ಅದು ಪ್ರೀತಿ, ಹಾರೈಕೆಗಳಿಂದ ತುಂಬಿದ ದಿವ್ಯ ಸ್ಪರ್ಶವಾಗಿತ್ತು; ಅದು ನನ್ನನ್ನು ಸಂಪೂರ್ಣ ಪರವಶುಗೊಳಿಸಿತು. ಅವರ ಸಾನ್ನಿಧ್ಯದಲ್ಲಿ ನನ್ನಲ್ಲಿ ಒಂದು ಬಗೆಯ ಪುಳಕ, ಉನ್ನತಿಗೇರಿದ ಭಾವನೆ ಉಂಟಾಗಿತ್ತು. ಆದರೆ ಆಗ ಹುಡುಗನಾಗಿದ್ದ ನನಗೆ ಅದರ ಆಳ ಎಂತಹದು ಎಂಬುದು ಅರ್ಥವಾಗಿರಲಿಲ್ಲ. ಆದರೆ ಆ ಗಂಭೀರ ಸನ್ನಿವೇಶವು ನನ್ನ ಅಂತ ರಂಗದಲ್ಲಿ ಭವ್ಯತೆಯ ಭಾವವನ್ನು ತುಂಬಿಬಿಟ್ಟಿತ್ತು ಎಂಬು ದಂತೂ ಆಗ ನನ್ನ ಅರಿವಿಗೆ ಬಂದಿತ್ತು. ನಮ್ಮ ನಡುವೆ ಯಾವುದೇ ಮಾತುಕತೆ ನಡೆಯಲಿಲ್ಲ ; ಅವರೂ ನನ್ನ ಬಗ್ಗೆ ಯಾವುದೇ ಪ್ರಶ್ನೆಗಳನ್ನು ಕೇಳಲಿಲ್ಲ. ಕೆಲವೇ ನಿಮಿಷಗಳಲ್ಲಿ ಶ್ರೀಮಾತೆ ಯವರು ಅಲ್ಲಿಂದ ಹೊರಟುಹೋದ ಮೇಲೆ, ಗೋಲಾಪ್ ಮಾ ಕೆಲವು ಹಣ್ಣುಹಂಪಲು, ಸಿಹಿತಿಂಡಿ ಇವುಗಳನ್ನು ಪ್ರಸಾದವಾಗಿ ಕೊಟ್ಟರು. ಭಾವಭರಿತನಾಗಿ ನಾನು ಕೆಳ ಅಂತಸ್ತಿಗೆ ಬಂದೆ, ಆಗ ಮನೆಯೊಳಕ್ಕೆ ಬರುತ್ತಿದ್ದ ಸ್ವಾಮಿ ತ್ರಿಗುಣಾತೀತಾನಂದರನ್ನು ಭೇಟಿಯಾದೆ. ಅವರು ನಸುನಗುತ್ತ, ''ಓ! ನೀನು ಭಾರೀ ಬುದ್ಧಿವಂತ ಹುಡುಗ! ನಾನು ಇಲ್ಲದಿದ್ದಾಗ ನೀನು ಸದ್ದಿಲ್ಲದೆ ಬಂದು ಶ್ರೀಮಾತೆಯವರನ್ನು ಭೇಟಿಯಾದೆ'' ಎಂದರು.

ಸ್ವಾಮಿ ತ್ರಿಗುಣಾತೀತಾನಂದರು ಆ ಮನೆಯಲ್ಲಿ ಇದ್ದು ಕೊಂಡು, ಶ್ರೀಮಾತೆಯವರ ಸೌಕರ್ಯಗಳನ್ನು ನೋಡಿಕೊಳ್ಳುತ್ತಿ ದ್ದರು; ಅವರ ದರ್ಶನಕ್ಕಾಗಿ ಅಲ್ಲಿಗೆ ಬರುತ್ತಿದ್ದ ಶ್ರೀರಾಮಕೃಷ್ಣರ ಭಕ್ತರ ಅಗತ್ಯಗಳನ್ನೂ ಅವರು ನೋಡಿಕೊಳ್ಳುತ್ತಿದ್ದರು. ಸ್ವಾಮಿ ಯೋಗಾನಂದರು ಕೂಡಾ ಶ್ರೀಮಾತೆಯವರ ಅನುಕೂಲತೆ, ಸೌಕರ್ಯಗಳನ್ನು ನೋಡಿಕೊಳ್ಳುತ್ತಿದ್ದರು. ಅವರ ಕೃಪೆಯಿಂದಾ ಗಿಯೇ ನಾನು ಮೊತ್ತಮೊದಲ ಬಾರಿ ಶ್ರೀಮಾತೆಯವರನ್ನು ನೋಡುವಂತಾದುದು ನನ್ನ ಸೌಭಾಗ್ಯವೆಂದೇ ಹೇಳಬೇಕು.

ಇದಾದ ಬಳಿಕ ಹೆಚ್ಚಾಗಿ ಪ್ರತಿದಿನವೂ ನಾನು ಶ್ರೀಮಾತೆ ಯವರನ್ನು ನೋಡಲು ಹೋಗುತ್ತಿದ್ದೆ. ಗಂಗಾಸ್ನಾನ ಮಾಡಿ, ಹೂಗಳೊಂದಿಗೆ ನಾನು ಶರತ್ ಸರ್ಕಾರ್ ಅವರ ಮನೆಗೆ ಶ್ರೀಮಾತೆಯವರ ದರ್ಶನ ಪಡೆಯಲು ಹೋಗುತ್ತಿದ್ದೆ. ಶ್ರೀಮಾತೆ ಅಲ್ಲಿ ಸುಮಾರು ಒಂದು ತಿಂಗಳ ಕಾಲ ತಂಗಿದ್ದರು. ಅನಂತರ ಅವರು ಜಯರಾಮಬಾಟಿಗೆ ಹೋದರು. ಅವರಿಗೆ ನನ್ನ ಹೆಸ ರಷ್ಟೇ ತಿಳಿಸಲಾಗಿದ್ದರೂ, ಅವರು ನನ್ನ ಬಗ್ಗೆ ಯಾರು, ಏನು ಎಂಬಿತ್ಯಾದಿ ಏನೂ ವಿಚಾರಿಸಿರಲಿಲ್ಲ. ನಾನು ಹೋದಾಗಲೆಲ್ಲ ಅವರು ಗೋಲಾಪ್ ಮಾ ಅಥವಾ ಬೇರೆ ಯಾರಾದರೂ ಸೇವಕಿ ಯರೊಂದಿಗೆ ನನ್ನ ಮುಂದೆ ಬಂದು, ನಾನು ಹೂಗಳನ್ನು ಅವರ ಪಾದಗಳಿಗೆ ಅರ್ಪಿಸಲು ಅವಕಾಶ ನೀಡಿ ಕೃಪೆ ತೋರುತ್ತಿದ್ದರು. ಯಾವುದೇ ಮಾತುಕತೆಯಿಲ್ಲ; ನಾನು ಯಾರು, ಎಲ್ಲಿಂದ ಬಂದೆ ಇತ್ಯಾದಿ ಏನನ್ನೂ ಅವರು ಕೇಳುತ್ತಿರಲಿಲ್ಲ. ಅರ್ಚಕನು ತನ್ನ ಮೂರ್ತಿಯ ಮುಂದೆ ಹೂಗಳನ್ನು ಅರ್ಪಿಸುವಂತೆ, ನಾನು ಅವರ ಪಾದಗಳಲ್ಲಿ ಹೂಗಳನ್ನು ಅರ್ಪಿಸುತ್ತಿದ್ದೆ. ಹೌದು ಮೂರ್ತಿಯೇ — ಆದರೆ ಅದು ಮಣ್ಣಿನ, ಕಲ್ಲಿನ ಅಥವಾ ಕಂಚಿನ ಮೂರ್ತಿಯಲ್ಲ ; ಜೀವಂತವಾದ, ಎಲ್ಲ ಆದರ್ಶಗಳ ಮೂಲವಾದ, ಮಾನವ ಮೂರ್ತಿ. ನಾನು ಭೇಟಿಯಾದಾಗಲೆಲ್ಲ ಅಲ್ಲಿ ಅಬಾಧಿತ ಮೌನವೊಂದು ಇರುತ್ತಿತ್ತು; ಆದರೆ ಅದು

ಮೂಕವಾದ, ಕಿವುಡಾದ ಮೌನವಲ್ಲ. ಆಡುವ ಮಾತಿಗಿಂತ ಹೆಚ್ಚಿನ ಸಂವಾದ ಅಲ್ಲಿರುತ್ತಿತ್ತು. ಆ ಮೌನವು ಭವ್ಯತೆಯಿಂದ ಕೂಡಿತ್ತು; ಗಾಢವಾಗಿತ್ತು. ಅದು ಶುದ್ಧೀಕರಿಸುವಂತೆ, ಅಂತರಂಗ ವನ್ನು ಆಳವಾಗಿ ಪ್ರವೇಶಿಸುವಂತೆ ಇರುತ್ತಿತ್ತು. ಅದು ಜಗ ನ್ಮಾತೆಯ ಜೀವಂತ ಕರುಣೆಯ ನಿರರ್ಗಳ ಪ್ರವಾಹದಿಂದ ಹೊರ ಹೊಮ್ಮುವ ಮಾಧುರ್ಯ, ಮೃದುತ್ವಗಳಿಂದ ಮಿರುಗುತ್ತಿತ್ತು. ಚಿಕ್ಕ ಹುಡುಗನಾಗಿದ್ದರೂ ನನ್ನ ಅರಿವಿಗಿದು ಬಂದಿತ್ತು — ಆ ಮೌನವು ಅಪರಿಚಿತರ ಮುಂದೆ ಸಹಜವಾಗಿ ಉಂಟಾಗುವ ನಾಚಿಕೆಯಲ್ಲ, ಅಥವಾ ಸಾಮಾಜಿಕ ನಡವಳಿಕೆಯಲ್ಲ; ಆದರೆ ತನ್ನ ಮುಂದಿರುವ ವ್ಯಕ್ತಿಯ ಹೃದಯಾಂತರಾಳವನ್ನು ಸ್ಪರ್ಶಿ ಸುವ ಪವಿತ್ರ ಹಾಗೂ ನಿಶ್ಶಬ್ದ ಸಂವಾದವದು — ಎಂದು. ಅದು ಆ ವ್ಯಕ್ತಿಯಲ್ಲಿ ಭರವಸೆ ಹಾಗೂ ನಿರ್ಭೀತಿಯನ್ನು ತುಂಬುತ್ತಿತ್ತು. ನನ್ನ ಬಾಲ್ಯಸಹಜವಾದ ಭಾವುಕತೆಯಿಂದ ನಾನು ಕಲ್ಪಿಸಿಕೊಳ್ಳು ತ್ತಿದ್ದೆ, ಭಗವಂತನ ರಹಸ್ಯಗಳು ನಿಗೂಢವಾಗಿರುವಂತೆ, ಶ್ರೀಮಾತೆ ಯವರ ಕೃಪೆ ಹಾಗೂ ಪ್ರೀತಿ ಇವು ಅವರ ವ್ಯಕ್ತಿತ್ವದ ಹಿಂದೆ ಅಡಗಿವೆ — ಎಂದು. ಅವರ ಅತ್ಯುನ್ನತವಾದ ಹಾಗೂ ಶಕ್ತಿ ಪೂರ್ಣವಾದ ಸಾನ್ನಿಧ್ಯವು ನನ್ನ ಒಳಗಿನ ಆಲೋಚನೆಗಳನ್ನು ಪವಿತ್ರಗೊಳಿಸುತ್ತಿತ್ತು; ನನ್ನನ್ನು ಮಹೋನ್ನತವಾದ ಭಾವನೆ, ಆದರ್ಶಗಳೊಂದಿಗೆ ಉನ್ನತ ಸ್ತರಕ್ಕೇರಿಸುತ್ತಿತ್ತು. ಶ್ರೀಮಾತೆಯವ ರೊಂದಿಗೆ ಇಂಥ ಮೌನ ಸಂವಾದ ನಡೆದಾಗಲೆಲ್ಲ ಹೀಗೆ ಹೊಸ ಸ್ಫೂರ್ತಿ, ಭರವಸೆ ಹಾಗೂ ಶಾಂತಿ ನನ್ನನ್ನು ತುಂಬಿ ಧನ್ಯ ವಾಗಿಸದ ಒಂದು ದಿನವೂ ನನಗೆ ನೆನಪಿಲ್ಲ. ನನ್ನ ಹೆತ್ತವರಿ ಗಿಂತಲೂ ಮಿಗಿಲಾದ ಒಬ್ಬರ ಬಳಿಗೆ ನಾನು ಬಂದಿದ್ದೇನೆ ಎಂದು ನನ್ನ ಅಂತರಂಗದಲ್ಲಿ ಯಾವಾಗಲೂ ನಾನು ಭಾವಿಸುತ್ತಿದ್ದೆ.

ನಾನು ಬಲರಾಮ ಮಂದಿರದಲ್ಲಿ ಹಾಗೂ ಆಲಂಬಜಾರ್ ಮಠದಲ್ಲಿ ಇರುತ್ತಿದ್ದ ಸ್ವಾಮಿಗಳ ಬಳಿಗೆ ಆಗಾಗ ಹೋಗುತ್ತಿದ್ದು ದಕ್ಕಾಗಿ ಸ್ವಾಮಿ ತ್ರಿಗುಣಾತೀತಾನಂದಜಿಯವರು ನನ್ನನ್ನು ಅನೇಕ ಬಾರಿ ಬೈದಿದ್ದರು. ಇದರಿಂದ ನಾನು ವಿದ್ಯಾಭ್ಯಾಸವನ್ನು ಕಡೆಗಣಿಸುತ್ತಿದ್ದೇನೆ ಎಂದು ಅವರು ಹಾಗೆ ಬಯ್ಯುತ್ತಿದ್ದರು. ಅವರು ಹೀಗೆ ಬಯ್ಯುತ್ತಿದ್ದರು: ''ಇಲ್ಲಿ ನೋಡು ಹುಡುಗ, ನೀನು ನಿನ್ನ ಶಾಲೆಯ ಪಠ್ಯಪುಸ್ತಕಗಳನ್ನು ಗಮನಕೊಟ್ಟು ಓದ ಬೇಕು. ಭಗವಂತನ ಸಾಕ್ಷಾತ್ಕಾರ ಅಷ್ಟೊಂದು ಸುಲಭದ ಕೆಲಸ ವೆಂದು ನೀನು ತಿಳಿದಿದ್ದೀಯಾ? ಯಾರಿಗೆ ತನ್ನ ಓದಿನ ಕಡೆಗೆ ಮನಸ್ಸನ್ನು ಏಕಾಗ್ರಗೊಳಿಸಲು ಸಾಧ್ಯವಿಲ್ಲವೋ, ಅವರಿಗೆ ಪ್ರಾರ್ಥನೆ, ಧ್ಯಾನ ಮಾಡುವಾಗಲೂ ಏಕಾಗ್ರತೆ ಸಾಧ್ಯವಿಲ್ಲ. ಅದು ಪರೀಕ್ಷೆ ಪಾಸಾಗುವುದಕ್ಕಿಂತಲೂ ಕಷ್ಟದ ಕೆಲಸ. ಮೊದಲು ಪುಸ್ತಕಗಳನ್ನು ಓದಿ ಒಳ್ಳೆಯ ಜ್ಞಾನ ಸಂಪಾದನೆ ಮಾಡು. ಅನಂತರ ಪರಿಶುದ್ಧವಾದ ಜೀವನ ನಡೆಸು. ಅದು ನಿನಗೆ ಧ್ಯಾನ, ಪ್ರಾರ್ಥನೆ ಮಾಡಲು ಸಹಾಯ ಮಾಡುವುದು.'' ನಾನು ಗೌರವಪೂರ್ವಕವಾಗಿ ಅವರ ಸಲಹೆಯನ್ನು ಕೇಳುತ್ತ ಮೌನ ವಾಗಿ ಇದ್ದುಬಿಡುತ್ತಿದ್ದೆ. ಶ್ರೀಮಾತೆಯವರನ್ನು ಭೇಟಿಯಾಗಲು ಬಹುತೇಕ ಪ್ರತಿದಿನವೂ ನಾನು ಹೋಗುತ್ತಿದ್ದುದರಿಂದ, ಸ್ವಾಮಿ ತ್ರಿಗುಣಾತೀತಾನಂದರು ನನ್ನ ಮೇಲೆ ಕೃಪೆ ತೋರಿ, ಅವರು ಶ್ರೀಮಾತೆಯವರನ್ನು ಕುರಿತು ರಚಿಸಿದ ಸಂಸ್ಕೃತ ಸ್ತೋತ್ರ ವೊಂದನ್ನು ನನಗೆ ಕೊಟ್ಟರು. ಅದು 'ಚಂಡಿ' (ಶ್ರೀ ದುರ್ಗಾ ಸಪ್ತಶತೀ)ಯ ರಚನೆಯಂತಿತ್ತು. ಪ್ರತಿದಿನ ಬೆಳಿಗ್ಗೆ ಅದನ್ನು ಪಠಿಸುವಂತೆ ಅವರು ನನಗೆ ಸಲಹೆಯನ್ನಿತ್ತರು. ಅದು ಸಾಕಷ್ಟು ದೀರ್ಘವಾದ ಸ್ತೋತ್ರವಾಗಿತ್ತು. ಆದರೆ ದುರದೃಷ್ಟವಶಾತ್ ನನ್ನ ನೆರೆಮನೆಯವರು ಅದನ್ನು ನನ್ನಿಂದ ತೆಗೆದುಕೊಂಡಿದ್ದರು, ಅವರ ಬಳಿ ಅದು ಕಳೆದುಹೋಯಿತು.

ಶ್ರೀರಾಮಕೃಷ್ಣರ ಗೃಹಸ್ಥ ಶಿಷ್ಯರಾದ ಮಣೀಂದ್ರ ಕೃಷ್ಣ ಗುಪ್ತ ಅವರು ನನ್ನ ನೆರೆಮನೆಯವರು; ನನ್ನ ಉತ್ತಮ ಸ್ನೇಹಿತರೂ ಆಗಿದ್ದರು. ಬಂಗಾಳದ ಪ್ರಸಿದ್ಧ ಕವಿಗಳಾದ ಈಶ್ವರಚಂದ್ರ ಗುಪ್ತರ ಅಳಿಯರಾಗಿದ್ದ ಅವರೂ ಸ್ವತಃ ಕವಿಗಳು. ಈಶ್ವರ ಚಂದ್ರರು ಒಂದು ಬಂಗಾಳಿ ದಿನಪತ್ರಿಕೆಯ ಸಂಪಾದಕರಾಗಿ ದ್ದರು. ಮಣೀಂದ್ರರು ಆ ಪತ್ರಿಕೆಯ ಸಂಪಾದಕರೂ, ವ್ಯವಸ್ಥಾ ಪಕರೂ ಆಗಿದ್ದರು. ಸ್ವಾಮಿ ವಿವೇಕಾನಂದರು ೧೮೯೭ರಲ್ಲಿ ಪಶ್ಚಿಮ ದೇಶಗಳಿಂದ ಮರಳಿದಾಗ ಮಣೀಂದ್ರರು ತೀವ್ರ ಆರ್ಥಿಕ ಮುಗ್ಗಟ್ಟಿಗೆ ಒಳಗಾಗಿದ್ದರು. ಸ್ವಾಮೀಜಿ ಈ ಬಗ್ಗೆ ತಮ್ಮ ಗುರುಭಾಯಿಗಳಿಂದ ತಿಳಿದರು. ಒಂದು ದಿನ ಅವರು ಮಣೀಂದ್ರರನ್ನು ಭೇಟಿಯಾಗಿ, ಖಾಸಗಿಯಾಗಿ ಅವರಿಗೆ ಒಂದು ಸಾವಿರ ರೂಪಾಯಿಗಳನ್ನು ಉಡುಗೊರೆಯಾಗಿ ನೀಡಿದರು. ಮಣೀಂದ್ರರ ಮನೆಗೆ ಬೇಲೂರು ಮಠದ ಸ್ವಾಮಿಗಳು ಹಾಗೂ ಇತರ ಭಕ್ತರುಗಳು ಆಗಾಗ ಭೇಟಿ ಕೊಡುತ್ತಿದ್ದರು. ಅವರೆಲ್ಲರೂ ಮಣೀಂದ್ರರನ್ನು ಗುರುಭಾಯಿಗಳೆಂದೇ ತಿಳಿಯುತ್ತಿದ್ದರು, ಹಾಗೂ 'ಖೋಕಾ' ಅಥವಾ 'ಮಣಿ' ಎಂದು ಕರೆಯುತ್ತಿದ್ದರು. ಮಾತುಕತೆಯ ನಡುವೆ ಶ್ರೀಮಾತೆಯವರು ನನಗೆ ಒಮ್ಮೆ ಹೇಳಿ ದ್ದರು, ''ಮಣೀಂದ್ರನು ಠಾಕೂರರ (ಅಂದರೆ ಶ್ರೀರಾಮ ಕೃಷ್ಣರ) ಬಳಿಗೆ ಬಂದಾಗ ಇನ್ನೂ ಚಿಕ್ಕ ಹುಡುಗ. ಠಾಕೂರರಿಗೆ ಕಾಯಿಲೆಯಾಗಿದ್ದಾಗ, ಅವನು ಹಾಗೂ ಇನ್ನೊಬ್ಬ ಹುಡುಗ ದೋಲ್-ಯಾತ್ರೆಯ (ಹೋಳಿ) ದಿನ ಗಾಳಿ ಬೀಸುತ್ತಿದ್ದರು. ಉಳಿದವರೆಲ್ಲ ಹೊರಗೆ ಹೋಳಿ ಹಬ್ಬದ ಓಕುಳಿಯೆರಚಿ ಆಟ ವಾಡುತ್ತಿದ್ದರು. ಆದರೆ ಇವರಿಬ್ಬರೂ ಅಲ್ಲಿಗೆ ಹೋಗದೆ, ಠಾಕೂರ ರಿಗೆ ಗಾಳಿ ಬೀಸುತ್ತಿದ್ದರು. ಇದನ್ನು ನೋಡಿ ಠಾಕೂರರು ಕಣ್ಣೀರ ಿಳಿಸುತ್ತ ಹೇಳಿದ್ದರು, 'ಆಹ, ನನ್ನ ರಾಮಲಾಲನು ನನ್ನನ್ನು ಈ ಹುಡುಗರ ಮೂಲಕ ಸೇವೆ ಮಾಡುತ್ತಿದ್ದಾನೆ. ಇವರೇ ನನ್ನ ರಾಮಲಾಲ!' ಎಂದು.''

ಒಂದು ದಿನ ನಮ್ಮೆಲ್ಲರ ಎದುರಿಗೆ ಸ್ವಾಮಿ ತ್ರಿಗುಣಾತೀತಾ ನಂದರು ಶ್ರೀಮಾತೆಯವರಿಗೆ ಸ್ವಾಮಿ ವಿವೇಕಾನಂದರ ಒಂದು

ಪತ್ರವನ್ನು ಓದಿ ಹೇಳಿದರು. ಅದನ್ನು ಅವರು ಮಠದ ಗುರುಭಾಯಿಗಳಿಗೆ ಬರೆದಿದ್ದರು. ಅದರಲ್ಲಿ ಶ್ರೀಮಾತೆಯವರ ಖರ್ಚುವೆಚ್ಚಗಳನ್ನು ಹೇಗೆ ನಿಭಾಯಿಸಲಾಗುತ್ತಿದೆ ಎಂದು ವಿಚಾರಿಸಿದ್ದರು. ಅದನ್ನು ಗುರುಭಾಯಿಗಳೆಲ್ಲರೂ ಓದಬೇಕೆಂದೂ, ಶ್ರೀಮಾತೆಯವರ ಹಾಗೂ ಗೋಲಾಪ್ ಮಾ, ಯೋಗಿನ್ ಮಾ ಅವರ ಮುಂದೆಯೂ ಓದಬೇಕೆಂದೂ ಸ್ವಾಮೀಜಿ ಬರೆದಿದ್ದರು. ಅವರು ತಮ್ಮ ಗುರುಭಾಯಿಗಳನ್ನು ಕೋರುತ್ತ, ಅವರೆಲ್ಲರೂ ಶ್ರೀರಾಮಕೃಷ್ಣರ ಸಂದೇಶಗಳನ್ನು ಪ್ರಚಾರಮಾಡುತ್ತಾ ಇತರರ ಒಳಿತಿಗಾಗಿ ತಮ್ಮ ಜೀವನವನ್ನು ಸಮರ್ಪಿಸಬೇಕೆಂದು ತಿಳಿಸಿದ್ದರು. ಈ ಆದರ್ಶಕ್ಕಾಗಿ ತನ್ನ ಎಲ್ಲವನ್ನೂ ಬೇಕಾದರೆ ಅರ್ಪಿಸಬೇಕೆಂದೂ ಅವರು ಹೇಳಿದ್ದರು. ಶ್ರೀರಾಮಕೃಷ್ಣರ ಆದರ್ಶವನ್ನು ಸ್ವಾಮಿಜಿ ತೋರಿಸಿಕೊಟ್ಟದ್ದನ್ನು ಕೇಳಿ ಎಲ್ಲರೂ ಸ್ಫೂರ್ತಿ ತಳೆದು, ಮೌನವಾಗಿದ್ದರು. ಕೆಲವು ನಿಮಿಷಗಳ ನಂತರ ಗೋಲಾಪ್ ಮಾ ಸ್ವಾಮಿ ತ್ರಿಗುಣಾತೀತಾನಂದರಿಗೆ ಹೇಳಿದರು: ''ನೋಡು, ಶಾರದ (ಇದು ತ್ರಿಗುಣಾತೀತಾನಂದರ ಪೂರ್ವಾಶ್ರಮದ ಹೆಸರು), ಶ್ರೀಮಾತೆ ಹೇಳುತ್ತಾರೆ, 'ನರೇನ್ ಶ್ರೀರಾಮಕೃಷ್ಣರ ಒಂದು ಉಪಕರಣ. ಅವರೇ ಅವನನ್ನು ಈ ಮಾತುಗಳನ್ನು ಬರೆಯುವಂತೆ ಮಾಡಿದ್ದಾರೆ. ಅದರಿಂದ ಅವರ ಶಿಷ್ಯರು ಹಾಗೂ ಭಕ್ತರು ಸ್ಫೂರ್ತಿ ಪಡೆದು, ಠಾಕೂರರ ಕೆಲಸ ಮಾಡುತ್ತಾರೆ, ಜಗತ್ತಿನ ಎಲ್ಲರಿಗೂ ಒಳಿತನ್ನು ಮಾಡುತ್ತಾರೆ. ನರೇನ್ ಬರೆದುದೆಲ್ಲವೂ ಸತ್ಯ – ಅದು ಮುಂದೆ ಕೆಲಸ ಮಾಡುವುದು' ಅಂತ.'' ಶ್ರೀಮಾತೆಯವರ ಈ ಮಾತುಗಳನ್ನು ಕೇಳಿ ಅಲ್ಲಿದ್ದವರಿಗೆ ಹರ್ಷವುಂಟಾಯಿತು. ತಮ್ಮ ಹೃದಯದಲ್ಲಿ ಉಕ್ಕಿ ಬರುತ್ತಿದ್ದ ಭಾವನೆಗಳನ್ನು ವ್ಯಕ್ತಪಡಿಸಲಾಗದೆ, ಅವರೇ ಮಾತಿನ ಮೂಲಕ ಹೊರ ಹೊಮ್ಮಿಸಿದಂತೆ ಅವರಿಗೆ ಭಾಸವಾಯಿತು. ನಿಜಕ್ಕೂ ಆ ದಿನ ಧನ್ಯ!

ಆ ಗಾಢ ಸನ್ನಿವೇಶದಲ್ಲಿ ನನ್ನ ನರನಾಡಿಗಳಲ್ಲಿ ಒಂದು ಬಗೆಯ ಪುಳಕದ ಭಾವ ಸಂಚರಿಸಿತ್ತು. ನಾವೆಲ್ಲ ಹೃದಯ ತುಂಬಿ ಬಂದ ಒಂದು ವಿಶೇಷ ಅನುಭವದೊಂದಿಗೆ ಹಾಗೂ ಸ್ವಾಮೀಜಿ ಬಗ್ಗೆ ಅಪರಿಮಿತ ಗೌರವ, ಮೆಚ್ಚುಗೆಗಳನ್ನು ಹೊಂದಿ ಮನೆಗೆ ಮರಳಿದೆವು. ಶ್ರೀಮಾತೆಯವರು ಸ್ವಾಮೀಜಿಯ ಬಗ್ಗೆ ಆಡಿದ ಸಮಂಜಸ ಮಾತುಗಳೂ ನಮ್ಮ ಮನಸ್ಸಿನ ಹಿನ್ನೆಲೆಯಲ್ಲಿದ್ದವು. ಶ್ರೀಮಾತೆಯವರು ಶರತ್ ಸರ್ಕಾರನ ಮನೆಯಲ್ಲಿ ವಾಸವಾಗಿದ್ದುದರ ಬಗ್ಗೆ ಅವನ ಸ್ನೇಹಿತರು ಅವನಿಗೆ ಹೇಳುತ್ತಿದ್ದರು: ''ಶರತ್, ಉಳಿದವರೆಲ್ಲರೂ ಮೂರು ದಿನ ದುರ್ಗಾಪೂಜೆ ಮಾಡಿದರೆ ನೀನು ಒಂದು ತಿಂಗಳ ಕಾಲ ಮಾಡಿದೆ. ಅವರೆಲ್ಲ ಜಗನ್ಮಾತೆಯ ಮಣ್ಣಿನ ಮೂರ್ತಿಯನ್ನು ಪೂಜಿಸುತ್ತಾರೆ. ಆದರೆ ನೀನು ಜೀವಂತ ಮೂರ್ತಿಯನ್ನೇ ಪೂಜೆ ಮಾಡಿದೆ.''

೧೮೯೮ರ ನವಂಬರ್ ತಿಂಗಳು ಅದು. ಪ್ರತಿ ವರ್ಷದಂತೆ ಆ ವರ್ಷವೂ ಶ್ರೀಮಾತೆಯವರು ಜಗದ್ಧಾತ್ರೀ ಪೂಜೆಯನ್ನು ಮಾಡಿದರು. ಆ ಸಂದರ್ಭದಲ್ಲಿ ನನಗೆ ಜಯರಾಮಬಾಟಿಗೆ (ಆಗ ಶ್ರೀಮಾತೆ ಅಲ್ಲಿದ್ದರು) ಏನೋ ಕಾರಣದಿಂದ ಹೋಗಲಾಗ ಲಿಲ್ಲ. ಆದರೆ ಅಲ್ಲಿಗೆ ನನ್ನ ಇತರ ಸ್ನೇಹಿತರು ಹೋಗಿದ್ದರು. ಮರಳಿ ಬಂದ ಮೇಲೆ ಅವರು ಆ ಸ್ಥಳದಲ್ಲಿ ಎಂಥ ಆಕರ್ಷಕ ಸನ್ನಿ ವೇಶ ಸೃಷ್ಟಿಯಾಗಿತ್ತು ಎಂಬುದರ ಬಗ್ಗೆ ವಿವರಿಸಿದರು. ಆಗ ಶ್ರೀಮಾತೆ ಅಪಾರ ಕೃಪೆ, ಅಸೀಮ ಪ್ರೀತಿಗಳಿಂದ ಕೂಡಿದ್ದರು. ಅವರನ್ನೆಲ್ಲ ಶ್ರೀಮಾತೆ ತಮ್ಮ ಮಕ್ಕಳಂತೆಯೇ ನೋಡಿಕೊಂಡರು. ಅವರೆಲ್ಲ ಅಲ್ಲಿ ಆನಂದದಿಂದ, ನೆಮ್ಮದಿಯಿಂದ ಇದ್ದರು. ತಮ್ಮ ಮನೆಯಲ್ಲೂ ಅವರು ಅಂಥ ಮಾತೃವಾತ್ಸಲ್ಯ, ಪ್ರೀತ್ಯಾದರ ಗಳನ್ನು ಅನುಭವಿಸಿರಲಿಲ್ಲ ಎಂದು ಅವರೆಲ್ಲ ಒಕ್ಕೊರಲಿನಿಂದ ಹೇಳಿದರು.

ನನ್ನ ಸ್ನೇಹಿತರೊಂದಿಗೆ ಜಯರಾಮಬಾಟಿಯಿಂದ ಮರಳಿದ್ದ ಒಬ್ಬರು ಮಧ್ಯವಯಸ್ಕರು ಮಣೀಂದ್ರನ ಬಳಿ ಎರಡು–ಮೂರು ದಿನ ತಂಗಿದ್ದರು. ಆಧ್ಯಾತ್ಮಿಕ ಜೀವನದಲ್ಲಿ ದಾರಿ ತೋರಿಸಬಲ್ಲ , ತನ್ನ ಗುರಿಯನ್ನು ತಲುಪಲು ಸಹಾಯಕನಾಗಬಲ್ಲ ಒಬ್ಬ ಯೋಗ್ಯ ಗುರುವಿನ ಕೃಪೆಯನ್ನು ಹೊಂದಲು ಅವರು ಅತ್ಯಂತ ಕಾತರರಾಗಿದ್ದರು. ತಮ್ಮ ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ ; ಯಾವಾಗಲೂ ತಮ್ಮ ಮುಂದಿನ ಆಧ್ಯಾತ್ಮಿಕ ಜೀವನದ ಬಗ್ಗೆ ಅವರು ವ್ಯಾಕುಲರಾಗಿದ್ದರು. ಒಂದು ದಿನ ರಾತ್ರಿ ಅವರು ಕನಸಿನಲ್ಲಿ ಅಸಾಧಾರಣ ಪ್ರಭೆಯಿಂದ ಕೂಡಿದ ವ್ಯಕ್ತಿಯನ್ನು ಕಂಡರು — ಅದು ಶ್ರೀರಾಮಕೃಷ್ಣರೆಂದು ಅವರಿಗೆ ತಿಳಿಯಿತು. ಶ್ರೀರಾಮಕೃಷ್ಣರು ಅವರಿಗೆ ತಮ್ಮಂತೆಯೇ ಉಜ್ವಲ ಪ್ರಭೆಯಿಂದ ಬೆಳಗುತ್ತಿದ್ದ ಇನ್ನೊಬ್ಬ ಸ್ತ್ರೀಯ ಕಡೆಗೆ ತೋರಿಸಿ, ಜಯರಾಮಬಾಟಿಗೆ ಹೋಗುವಂತೆ ಆದೇಶವಿತ್ತರು. ಕೂಡಲೇ ಈ ಮಧ್ಯವಯಸ್ಕ ವ್ಯಕ್ತಿ ಅಲ್ಲಿಗೆ ಒಬ್ಬಂಟಿಯಾಗಿ ಹೊರಟರು. ಜಯರಾಮಬಾಟಿಯನ್ನು ತಲುಪಿ, ಅಲ್ಲಿ ಅವರು ಶ್ರೀಮಾತೆಯವರನ್ನು ಭೇಟಿಯಾದರು. ಶ್ರೀಮಾತೆಯವರು ಅವನನ್ನು ವಿಶೇಷ ಪ್ರೀತಿ, ಆದರಗಳಿಂದ ಬರಮಾಡಿಕೊಂಡರು. ಜಗದ್ಧಾತ್ರೀ ಪೂಜೆಯ ದಿನ ಶ್ರೀಮಾತೆಯವರು ಅವನಿಗೆ ಮಂತ್ರದೀಕ್ಷೆ ನೀಡಿದರು. ಅವರು ಶ್ರೀಮಾತೆಯವರನ್ನು ಕಂಡಾಗ ಅವನಿಗೆ ಅತ್ಯಾಶ್ಚರ್ಯ — ಅವರು ಕನಸಿನಲ್ಲಿ ಅವರನ್ನು ಕಂಡಂತೆಯೇ ಇದ್ದರು! ಈ ವಿಷಯವನ್ನು ಅವರೇ ನನಗೆ ಹೇಳಿದರು. ಈ ಸಂಬಂಧವಾಗಿ ಮಣೀಂದ್ರನೂ ಹೇಳಿದ್ದ – ಶ್ರೀರಾಮಕೃಷ್ಣರು ಕಾಯಿಲೆಯಿಂದಿದ್ದಾಗ ಹೀಗೆ ಹೇಳಿದ್ದನ್ನು ಅವನು ಕೇಳಿಸಿಕೊಂಡಿದ್ದನಂತೆ: ''ನನ್ನ ಕೆಲಸ ಅರ್ಧದಷ್ಟು ಪೂರೈಸಿದೆ. ಅವಳು (ಅಂದರೆ, ತಮ್ಮ ಸಹಧರ್ಮಿಣಿ, ಶ್ರೀಮಾತೆಯವರು) ಉಳಿದ ಕೆಲಸವನ್ನು ಜಗತ್ತಿನ ಹಿತಕ್ಕಾಗಿ ಮಾಡುವಳು.''